# ಚನ್ನರಾಜ ಹಟ್ಟಿಹೊಳಿಗೆ ಮುರಗೋಡ ಮುಕುಟ ಪ್ರಶಸ್ತಿ



ಮುರಗೋಡ : ಮುರಗೋಡ ಮಹಾಂತ ಮಠದ ಜಾತ್ರಾ ಮಹೋತ್ಸವದ ಪ್ರಯುಕ್ತ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಬುಧವಾರ ಸಂಜೆ ಮಠಕ್ಕೆ ಭೇಟಿ ನೀಡಿದ್ದರು. ಮಹಾಂತ ಅಜ್ಜನವರ ಪ್ರತಿಮೆಗೆ ಭಕ್ತಿಪೂರ್ವಕ ನಮನ ಸಲ್ಲಿಸಿ, ಶ್ರೀ ಮ.ನ.ಪ್ರ.ಸ್ವ ನೀಲಕಂಠ ಮಹಾಸ್ವಾಮಿಗಳ ಆಶೀರ್ವಾದ ಪಡೆದರು.

ಇದೇ ಸಮಯದಲ್ಲಿ ರಾಜಕೀಯ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರ ಪಟ್ಟಿಯಲ್ಲಿ "ಮುರಗೋಡ ಮುಕುಟ" ಪ್ರಶಸ್ತಿಗೆ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಆಯ್ಕೆಯಾಗಿದ್ದು, ಅವರ ಪರವಾಗಿ ಲಕ್ಷ್ಮೀ ಹೆಬ್ಬಾಳಕರ್ ಪ್ರಶಸ್ತಿ ಸ್ವೀಕರಿಸಿದರು.

ಬೈಲಹೊಂಗಲ ಶಾಸಕ ಮಹಾಂತೇಶ ಕೌಜಲಗಿ, ಯುವ ಕಾಂಗ್ರೆಸ್ ಮುಖಂಡ ಮೃಣಾಲ ಹೆಬ್ಬಾಳಕರ್, ಜಿಲ್ಲಾ ಕಾಂಗ್ರೆಸ್ ಮುಖಂಡ ಮಹಾಂತೇಶ ಮತ್ತಿಕೊಪ್ಪ, ಯುವ ಕಾಂಗ್ರೆಸ್ ಅಧ್ಯಕ್ಷ ಕಾರ್ತಿಕ ಪಾಟೀಲ, ಅನೇಕ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಇದ್ದರು.

# ಕೇಂದ್ರ ಕಾರಾಗೃಹದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ



ಬೆಳಗಾವಿ: ದಿನಾಂಕ : 19 ರಂದು ಕೇಂದ್ರಕಾರಾಗೃಹ ಬೆಳಗಾವಿಯಲ್ಲಿ "ಅಂತರಾಷ್ಟ್ರೀಯಮಹಿಳಾ ದಿನಾಚರಣೆ" ನಿಮಿತ್ಯಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮದಆಧ್ಯಕ್ಷತೆಯನ್ನುಕಾರಾಗೃಹದ ಮುಖ್ಯಅಧೀಕ್ಷಕರಾದ ಶ್ರೀ. ಕೃಷ್ಣಕುಮಾರ ವಹಿಸಿದ್ದರು ಹಾಗೂ ಅಧೀಕ್ಷಕರಾದ ಶ್ರೀ. ವಿಜಯಎಸ್. ರೋಡಕರ ಹಾಗೂ ಆಡಳಿತಾಧಿಕಾರಿಗಳಾದ ಶ್ರೀ.ಬಿ. ಎಸ್. ಪೂಜಾರಿ ಉಪಸ್ಥಿತರಿದ್ದರು.

ಕಾರ್ಯಕ್ರಮ ಉದ್ದೇಶಿಸಿ ಶ್ರೀ. .ಕೃಷ್ಣಕುಮಾರ ಮಾತನಾಡಿ ತಾಳ್ಮೆ, ಸಹನೆಯ ಪ್ರತಿರೂಪವೇ ಹೆಣ್ಣು ಇಂದಿನ ಆಧುನಿಕಯುಗದಲ್ಲಿ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ಪುರುಷರಿಗೆ ಸರಿ ಸಮಾನವಾಗಿಕಾರ್ಯನಿರ್ವಹಿಸುತ್ತತಮ್ಮದೇಆದಛಾಪನ್ನುಮೂಡಿಸಿದ್ದಾರೆ. ಅವರಕೊಡುಗೆಯನ್ನು ಸ್ಮರಿಸಲು ಈ ದಿನವನ್ನು ಮಹಿಳೆಯರಿಗಾಗಿ ಮೀಸಲಾಗಿಸಲಾಗಿದೆ.ಸಮಾಜದಲ್ಲಿಮಹಿಳೆಯನ್ನು ಗೌರವಿಸುವ ಕಾರ್ಯಎಲ್ಲರ ಮನೆಗಳಿಂದಲೇಆರಂಭವಾಗಬೇಕು.ಕುಟುಂಬದಲ್ಲಿ ಪ್ರತಿಯೊಬ್ಬರುಗಂಡು ಹೆಣ್ಣು ಎಂಬ ಬೇಧಭಾವ ಮಾಡಬಾರದು. ಮಹಿಳೆಯರಿಗೆ ಸಿಗಬೇಕಾದ ಮೀಸಲಾತಿ ಪ್ರಮಾಣ ಹೆಚ್ಚಾಗಬೇಕು. ಹಾಗೂ ಇಂದಿನ ಆಧುನಿಕಕಾಲದಲ್ಲಿ ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವುದರಜೊತೆಗೆ ತಮ್ಮಕುಟುಂಬದ ಜವಾಬ್ದಾರಿಯನ್ನುಉತ್ತಮರೀತಿಯಲ್ಲಿ ನಿಭಾಯಿಸುತ್ತಿದ್ದಾರೆ. ಕಾರಣಸಮಜದಲ್ಲಿಮಹಿಳೆಯವರಿಗೆ ಅತ್ಯುನ್ನತ ಸ್ಥಾನವಿದೆ. ಮನೆಯೇ ಮೊದಲ ಪಾಠಶಾಲೆ.ತಾಯಿಯೇ ಮೊದಲ ಗುರು, ಹಾಗೂ ಹೆಣ್ಣೊಂದುಕಲಿತರೆ ಶಾಲೆಯೆಂದುತೆರೆದಂತೆಹೀಗೆ ಮಹಿಳೆಯರು ತಮ್ಮಜೀವನದಲ್ಲಿಒಬ್ಬ ಮಗಳಾಗಿ ಅಕ್ಕ ತಂಗಿಯಾಗಿ ಹೆಂಡತಿಯಾಗಿಅಮ್ಮನಾಗಿಹಾಗೂ ಈ ರೀತಿ ವಿವಿಧ ಪಾತ್ರಗಳನ್ನು ನಿಭಾಯಿಸುತ್ತಿದ್ದಾರೇಎಂದು ಹೇಳಿದಳು.

ಕಾರ್ಯಕ್ರಮದಲ್ಲಿ ಸಿಬ್ಬಂದಿಗಳಾದ ಸಿಮಾ ಕುರಬೇಟ, ರೇಶಮಾಹಾಗೂ ಸಂಗೀತಾ ಸಲಗರೆ ಹಾಗೂ ಶೃತಿ ಹುಲಸಗೇರಿಇವರು ಹಾಡುಗಳನ್ನು ಹಾಡಿದರು.

ಕಾರ್ಯಕ್ರಮದ ವೇದಿಕೆಯಲ್ಲಿಅಧೀಕ್ಷಕರಾದ ಶ್ರೀ ವಿಜಯಎಸ್ರೊಡಕರ, ಆಡಳಿತಾದಿ ಕಾರಿ ಶ್ರೀ ಬಿ.ಎಸ್.ಪೂಜಾರಿಹಾಗೂ ಜೈಲರಗಳಲಾದ ಶ್ರೀ ರಾಜೇಶ,ಶ್ರೀ ಬಸವರಾಜ ಭಜಂತ್ರಿ,ಶ್ರೀ ಎಫ್.ಟಿ.ದಂಡಯನವರ ಹಾಗೂ ಸಹಾಯಕಜೈಲರಶ್ರೀಮತಿ ಅನುಸಯಾ ಪಾಟೀಲ ಉಪಸ್ಥಿತರಿದರು. ಕಾರಾಗೃಹದಉಪಾಧ್ಯಾಯರಾದ ಶ್ರೀ ಎಸ್.ಎಸ್.ಯಾದಗುಡೆಕಾರ್ಯಕ್ರಮ ನಿರೂಪಿಸಿವಂದಿಸಿದರು.

# ಬೀದಿ ನಾಯಿಗಳು ಕಚ್ಚಿ ಸಾವನಪ್ಪಿದ ಕುರಿಗಳ ಮಾಲೀಕರಿಗೆ ಪರಿಹಾರ ನೀಡಲು ಆಗ್ರಹಿಸಿ ಪ್ರತಿಭಟನೆ



ಇಂಡಿ: ಬೀದಿ ನಾಯಿಗಳು ಕಚ್ಚಿ ಸಾವನಪ್ಪಿದ ಕುರಿಗಳ ಮಾಲೀಕರಿಗೆ ಪರಿಹಾರ ನೀಡಬೇಕು. ಬೀದಿ ನಾಯಿಗಳನ್ನು ಬೇರೆಡೆಗೆ ಸಾಗಿಸಬೇಕು ಎಂದು ಆಗ್ರಹಿಸಿ, ಬುಧವಾರ ಪುರಸಭೆ ವ್ಯಾಪ್ತಿಯಲ್ಲಿ ಬರುವ ಚವಡಿಹಾಳ ರಸ್ತೆಯಲ್ಲಿರುವ ವಸತಿ ಪ್ರದೇಶದ ಸಾರ್ವಜನಕರು ಯುವ ಮುಖಂಡ ಪ್ರಶಾಂತ ಲಾಳಸಂಗಿ ನೇತೃತ್ವದಲ್ಲಿ ಪಟ್ಟಣದ ಪುರಸಭೆಯ ಮುಂದೆ ನಾಯಿಗಳು ಕಚ್ಚಿ ಸಾವನಪ್ಪಿದ ಕುರಿಗಳನ್ನು ಪುರಸಭೆ ಆವರಣದ ಮುಂದೆ ಇಟ್ಟು ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಯುವ ಮುಖಂಡ ಪ್ರಶಾಂತ ಲಾಳಸಂಗಿ, ಪುರಸಭೆ ಸದಸ್ಯ ಅನೀಲಗೌಡ ಬಿರಾದಾರ, ಬಿಜೆಪಿ ಮುಖಂಡ ಅಶೋಕ ಅಕಲಾದಿ, ಪುರಸಭೆಯ ಘನತ್ಯಾಜ್ಯ ವಸ್ತುಗಳ ಸಂಗ್ರಹದ ಸುತ್ತಮುತ್ತಲು ಇರುವ ಜನವಸತಿ ಪ್ರದೇಶಗಳಿಗೆ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಕಳೆದ ವಾರ ಬೀದಿ ನಾಯಿಗಳು ಕಚ್ಚಿ 5 ರಿಂದ 6 ಕುರಿಗಳು ಮೃತಪಟ್ಟಿವೆ. ಮಂಗಳವಾರ ಸಂಜೆ ಮತ್ತೆ ಎರಡು ಕುರಿಗಳಿಗೆ ಬೀದಿನಾಯಿಗಳು ಕಚ್ಚಿದ್ದರಿಂದ ಸಾವನಪ್ಪಿವೆ. ಬೀದಿ ನಾಯಿಗಳಿಂದ ಸಾರ್ವಜನಕರು ಭಯ ಭೀತರಾಗಿದ್ದಾರೆ. ಕೂಡಲೇ ಬೀದಿ ನಾಯಿಗಳು ಕಚ್ಚಿ ಮೃತಪಟ್ಟ ಕುರಿ ಮಾಲೀಕರಿಗೆ ಪರಿಹಾರ ನೀಡಬೇಕು. ಬೀದಿ ನಾಯಿಗಳನ್ನು ಬೇರಡೆಗೆ ಸಾಗಿಸಬೇಕು. ಪುರಸಭೆ ಆಡಳಿತಾಧಿಕಾರಿ, ಎಸಿ ಅಬೀದ ಗದ್ಯಾಳ ಅವರು ಧರಣಿ ಸ್ಥಳಕ್ಕೆ ಬರುವವರೆಗೆ ಧರಣಿ ಮುಂದುವರೆಯುತ್ತದೆ ಎಂದು ಪಟ್ಟು ಹಿಡಿದರು.

ಸುದ್ದಿ ತಿಳಿದು ಸ್ಥಳಕ್ಕೆ ಆಗಮಿಸಿದ ಪುರಸಭೆ ಆಡಳಿತಾಧಿಕಾರಿ ಹಾಗೂ ಎಸಿ ಅಬೀದ್ ಗದ್ಯಾಳ ಅವರು, ಬೀದಿ ನಾಯಿಗಳನ್ನು ಬೇರೆಡೆಗೆ ಸಾಗಿಸಲು ಈಗಾಗಲೇ ನಾಯಿಗಳನ್ನು ಹಿಡಿಯುವವರನ್ನು ಹುಬ್ಬಳ್ಳಿಯಿಂದ ಬರಲು ಕರೆ ಮಾಡಲಾಗಿದೆ. ಇಂದು ಸಂಜೆ ಇಲ್ಲವೆ ನಾಳೆ ನಾಯಿಗಳನ್ನು ಹಿಡಿಸಿ ಬೇರೆಡೆಗೆ ಸಾಗಿಸಲಾಗುತ್ತದೆ. ನಾಯಿ ಕಚ್ಚಿ ಮೃತ ಪಟ್ಟಿರುವ ಕುರಿಗಳ ಮಾಲೀಕರಿಗೆ 15 ದಿನದಲ್ಲಿ ಸೂಕ್ತ ಪರಿಹಾರ ನೀಡಲಾಗುತ್ತದೆ ಎಂದು ಭರವಸೆ ನೀಡಿದ ಮೇಲೆ ಪ್ರತಿಭಟನಾಕಾರರು ಧರಣಿಯನ್ನು ಕೈಬಿಟ್ಟರು.

ಅನೀಲಗೌಡ ಬಿರಾದಾರ, ಪ್ರಶಾಂತ ಲಾಳಸಂಗಿ, ಅಶೋಕ ಅಕಲಾದಿ, ರಾಚು ಬಡಿಗೇರ, ಮಲ್ಲಪ್ಪ ಗುಡ್ಲ, ಶ್ರೀಶೈಲ ಪೂಜಾರಿ, ಮಾಳು ಪೂಜಾರಿ, ಬಸು ಪೂಜಾರಿ, ದಶರಥ ಇಂಗಳೆ, ಅಶೋಕ ತಾಂಬೆ, ಜಗದೀಶ ಹೊಟಗಿ, ಸನಗೊಂಡ ಪೂಜಾರಿ, ಸಂಗಮೇಶ ಬಂಡೆನವರ, ಅಮೀನ ಸೈಯದ, ದತ್ತು ಹೆಳವರ, ಮಲ್ಲು ತಾಂಬೆ, ಸುರೇಶ ಹೂಗಾರ ಇದ್ದರು.

# ಖಾನಾಪೂರ ಭಾಗದಲ್ಲಿ 23 ರಂದು ವಿದ್ಯುತ್ ನಿಲುಗಡೆ

ಬೆಳಗಾವಿ : ದಿನಾಂಕ 23.03.2024 ರಂದು ಬೆಳಿಗ್ಗೆ 09.00 ಘಂಟೆಯಿಂದ ಸಾಯಂಕಾಲ 04.00 ಘಂಟೆಯವರೆಗೆ ಕ.ವಿ.ಪ್ರ.ನಿ.ನಿ. ವತಿಯಿಂದ ನಾಲ್ಕನೇಯ ತ್ರೈಮಾಸಿಕ ಹಾಗೂ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ 110 ಕೆ.ವ್ಹಿ. ಖಾನಾಪೂರ ಉಪಕೇಂದ್ರದಿಂದ ಸರಬರಾಜು ಆಗುವ ಲೈಲಾ ಶುಗರ ಕಾರ್ಖಾನೆ, ದೇವಲತ್ತಿ, ಬಿದರಭಾವಿ, ಭಂಡಾರಗಾಳಿ, ಗರ್ಲಗುಂಜಿ, ತೋಪಿನಕಟ್ಟಿ, ಬೋರಗಾಂವ, ನಿಡಗಲ, ದೊಡ್ಡಹೊಸೂರ, ಸಣ್ಣಹೊಸೂರ, ಕರಂಬಳ, ಜಳಗಾ, ಕುಪ್ಪಟಗಿರಿ, ಲೋಕೊಳ್ಳಿ, ಲಕ್ಕೇಬೈಲ, ಯಡೋಗಾ, ಬಳೋಗಾ, ಜೈನಕೊಪ್ಪ, ಗಾಂಧಿನಗರ, ಹಲಕರ್ಣಿ, ಕೋರ್ಟ ಪ್ರದೇಶ, ಕೈಗಾರಿಕಾ ಪ್ರದೇಶ, ಬಾಚೋಳ್ಳಿ, ಕೌಂದಲ, ರುಮಾಡನಾವಗಾ, ಲಾಲವಾಡಿ, ಹೆಬ್ಬಾಳ, ನಂದಗಡ, ಕಸಬಾ ನಂದಗಡ, ಕಾರಲಗಾ, ಶಿವೊಳ್ಳಿ ಹಾಗೂ ಚಾಪಗಾಂವ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್‌ಸೆಟ್‌ಗಳ ಏರಿಯಾಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂಬ ವಿಷಯವನ್ನು ಸಾರ್ವಜನಿಕ ಹಿತದೃಷ್ಠಿಯಿಂದ ಪತ್ರಿಕಾ ಪ್ರಕಟಣೆ ನೀಡುವಂತೆ ಈ ಮೂಲಕ ವಿನಂತಿಸಲಾಗಿದೆ ಹಾಗೂ ದಿನಾಂಕ 23.03.2024 ರಂದು ಬೆಳಿಗ್ಗೆ 09.00 ಘಂಟೆಯಿಂದ ಸಾಯಂಕಾಲ 04.00 ಘಂಟೆಯವರೆಗೆ ಕ.ವಿ.ಪ್ರ.ನಿ.ನಿ. ವತಿಯಿಂದ ನಾಲ್ಕನೇಯ ತ್ರೈಮಾಸಿಕ ಹಾಗೂ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ 33ಕೆ.ವ್ಹಿ. ಲೋಂಡಾ ಹಾಗೂ ಖಾನಾಪೂರ ಉಪಕೇಂದ್ರದಿಂದ ಸರಬರಾಜು ಆಗುವ ನಾಗರಗಾಳಿ, ನಾಗರಗಾಳಿ ರೇಲ್ವೆ ಸ್ಟೇಶನ್, ಮುಂಡವಾಡ, ಕುಂಬರ್ಡಾ, ತಾರವಾಡ, ಲೋಂಡಾ, ಲೋಂಡಾ ರೇಲ್ವೆ ಸ್ಟೇಶನ್, ಗುಂಜಿ, ಮೋಹಿಶೇಟ, ವಾಟ್ರೆ, ಭಾಲ್ಕೆ ಬಿ.ಕೆ, ಭಾಲ್ಕೆ ಕೆ.ಎಚ್, ಶಿಂದೋಳ್ಳಿ, ಹೊನ್ನಲ, ಸಾವರಗಾಳಿ, ಅಂಬೇವಾಡಿ, ವಾಟ್ರೆ, ಭಾಲ್ಕೆ ಬಿ.ಕೆ, ಭಾಲ್ಕೆ ಕೆ.ಎಚ್, ಶಿಂದೋಳ್ಳಿ, ಹೊಸ್ಕಲ, ಸಾವರಗಾಳಿ, ಅಂಬೇವಾಡಿ, ತಿವೊಳ್ಳಿ, ಡೋಕೆಗಾಳಿ, ಖಾನಾಪೂರ ಪಟ್ಟಣ, ಶಿವಾಜಿ ನಗರ, ರುಮೇವಾಡಿ, ಓತೋಳ್ಳಿ, ಮೊದೇಕೊಪ್ಪ, ನಾಗುರ್ಡಾ, ರಾಮಗುರವಾಡಿ, ಅಂಬೋಳಿ, ಹರಸನವಾಡಿ, ಅಸೋಗಾ, ನೇರಸಾ, ಅಶೋಕ ನಗರ, ಮಂತುರ್ಗಾ, ಶೇಡೇಗಾಳಿ ಹಾಗೂ ಹೆಮ್ಮಡಗಾ ಪ್ರದೇಶಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್‌ಸೆಟ್‌ಗಳ ಏರಿಯಾಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಸಾರ್ವಜನಿಕರು ಸಹಕರಿಸುವಂತೆ ಹೆಸ್ಕಾಮ ವಿನಂತಿಸಿದೆ.

# ಪರೀಕ್ಷಾ ತಯಾರಿ ಮಕ್ಕಳನ್ನು ಪ್ರೇರೇಪಿಸುವಂತಿರಲಿ :ಬಿ.ಎಸ್. ಮಾಯಾಚಾರಿ



ಗದಗ, ; 2023–24ನೇ ಸಾಲಿನ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ಯಾವುದೇ ಭಯವಿಲ್ಲದೇ ಮುಕ್ತ ಮನಸ್ಸಿನಿಂದ ಬರೆಯಲು ಪರೀಕ್ಷಾ ಕೇಂದ್ರಗಳಲ್ಲಿ ಮೂಲಭೂತ ಅವಶ್ಯಕತೆಗಳಾದ ಆಸನದ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಸಿ.ಸಿ ಕ್ಯಾಮರಾ ಹಾಗೂ ಇನ್ನಿತರ ಅಗತ್ಯ ತಯಾರಿ ಮಾಡಿಕೊಂಡು ಭಯಮುಕ್ತ ವಾತಾವರಣದಲ್ಲಿ ಪರೀಕ್ಷೆ ಬರೆಯುವಂತೆ ನೋಡಿಕೊಳ್ಳಬೇಕೆಂದು ಬೆಳಗಾವಿಯ ಸರಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯದ ಪ್ರವಾಚಕರು ಹಾಗೂ ಗದಗ ಜಿಲ್ಲಾ ಎಸ್‌ಎಸ್‌ಎಲ್‌ಸಿ ನೋಡಲ್ ಅಧಿಕಾರಿಗಳೂ ಆದ ಬಿ.ಎಸ್. ಮಾಯಾಚಾರಿ ಅವರು ಮಾರ್ಗದರ್ಶನ ಮಾಡಿದರು. ಅವರು ಇಂದು ಗದಗ ಶಹರ ವಲಯ ಹಾಗೂ ಗ್ರಾಮೀಣ ವಲಯದ ಎಲ್ಲಾ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು ಹಾಗೂ ಪರೀಕ್ಷಾ ಕೇಂದ್ರಗಳ ಮಾರ್ಗಾಧಿಕಾರಿಗಳ ಸಭೆಯಲ್ಲಿ ಭಾಗವಹಿಸಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು ಸೂಚಿಸಿದ ನಿಯಮಗಳಂತೆ ಮುಖ್ಯ ಅಧೀಕ್ಷಕರು ಮತ್ತು ಅಭಿರಕ್ಷಕರು ತಮ್ಮ ಪಾಲಿನ ಕರ್ತವ್ಯಗಳನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕು. ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶವನ್ನು ನೀಡಬಾರದು ಮತ್ತು ಶಿಸ್ತಿನಿಂದ ಯಶಸ್ವಿಯಾಗಿ ಪರೀಕ್ಷೆ ನಡೆಸಲು ಮಾರ್ಗದರ್ಶನ ಮಾಡಿದರು.

ಅವರು ಶಹರ ವಲಯದ ಕೆಲವು ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರೀಕ್ಷಾ ತಯಾರಿ ಕುರಿತು ಪರಿಶೀಲನೆ ನಡೆಸಿದರು. ನಂತರ ಕೊಠಡಿ ಮೇಲ್ವಿಚಾರಕರ ತರಬೇತಿ ಕಾರ್ಯಾಗಾರದಲ್ಲಿ ಪಾಲ್ಗೊಂಡು ಮಾತನಾಡಿ ಕೊಠಡಿ ಮೇಲ್ವಿಚಾರಕರು ತಮಗೆ ವಹಿಸಿದ ಬ್ಲಾಕ್‌ನಲ್ಲಿ ಯಾವುದೇ ಎಲೆಕ್ಟ್ರಾನಿಕ್ಸ್ ಉಪಕರಣಗಳಿಗೆ ಅವಕಾಶ ನೀಡದೇ ವಿದ್ಯಾರ್ಥಿಗಳನ್ನು ತಪಾಸಣೆ ಮಾಡಿ ಪರೀಕ್ಷೆ ಬರೆಯಲು ಬಿಡಬೇಕು. ಪರೀಕ್ಷಾ ಬ್ಲಾಕ್‌ನಲ್ಲಿ ಕುಳಿತುಕೊಳ್ಳದೇ ಪರೀಕ್ಷಾರ್ಥಿಗಳ ಕಡೆಗೆ ಗಮನ ಹರಿಸುತ್ತ ಎಲ್ಲ ದಾಖಲೆಗಳನ್ನು ನಿರ್ವಹಿಸುತ್ತ ಉತ್ತಮ ರೀತಿಯಲ್ಲಿ ಪರೀಕ್ಷಾ ಕಾರ್ಯವನ್ನು ಮಾಡಬೇಕೆಂದು ಮಾರ್ಗದರ್ಶನ ಮಾಡಿದರು.

ಈ ಸಂದರ್ಭದಲ್ಲಿ ಗದಗ ಶಹರ ಹಾಗೂ ಗ್ರಾಮೀಣ ವಲಯಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಆರ್.ಎಸ್. ಬುರಡಿ ಹಾಗೂ ಶ್ರೀ ವಿ.ವಿ. ನಡುವಿನಮನಿರವರು ಉಪಸ್ಥಿತರಿದ್ದು, ಅಗತ್ಯ ಮಾರ್ಗದರ್ಶನ ಹಾಗೂ ಸೂಚನೆಗಳನ್ನು ನೀಡಿದರು. ಸಭೆಯಲ್ಲಿ ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳಾದ ಶ್ರೀ ಎಂ.ಎಚ್. ಕಂಬಳಿ, ತಾಲೂಕ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಾದ ಶ್ರೀ ಮಾಣಿಕೇಶ್ವರ,

ತಹಶೀಲ್ದಾರ ಕಾರ್ಯಾಲಯದ ಗ್ರೇಡ್–2 ತಹಶೀಲ್ದಾರರಾದ ಶ್ರೀ ಬಾಲೇಹೊಸೂರ, ಪೋಲೀಸ್ ಇಲಾಖೆ ಎಎಸ್‌ಐಗಳಾದ ಶ್ರೀ ವಿ.ವಿ. ಪತ್ತಾರ, ಎರಡೂ ವಲಯಗಳ ಕ್ಷೇತ್ರ ಸಮನ್ವಯಾಧಿಕಾರಿಗಳು ಹಾಗೂ ಎಸ್‌ಎಸ್‌ಎಲ್‌ಸಿ ತಾಲೂಕಾ ನೋಡಲ್ ರವರು ಉಪಸ್ಥಿತರಿದ್ದರು.

## ಲಾಯನ್ಸ್ ಕ್ಲಬ್‌ದಲ್ಲಿ ಮಹಿಳಾ ದಿನಾಚರಣೆ–ಸಾಧಕ ಮಹಿಳೆಯರಿಗೆ ಗೌರವ

# ಮಹಿಳೆ ಎಲ್ಲ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದ್ದಾಳೆ : ಪೋತ್ನೀಸ್




ಗದಗ, ಮಾ. 20 : ಆಧುನಿಕ ಇಂದಿನ ದಿನಗಳಲ್ಲಿ ಮಹಿಳೆ ಎಲ್ಲ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದ್ದಾಳೆ ಎಂದು ಲಾಯನ್ಸ್ ಕ್ಲಬ್‌ನ ಮಾಜಿ ಜಿಲ್ಲಾ ಗೌರನರ್ ಎಂ.ಜೆ.ಎಫ್ ಆನಂದ ಪೋತ್ನೀಸ್ ಅಭಿಪ್ರಾಯಪಟ್ಟರು.

ಅವರು ನಗರದ ಲಾಯನ್ಸ್ ಕ್ಲಬ್ ಸಭಾಂಗಣದಲ್ಲಿ ಗದಗ–ಬೆಟಗೇರಿ ಲಾಯನ್ಸ್ ಕ್ಲಬ್ ಏರ್ಪಡಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಮಹಿಳೆ ಇಂದು ವಿಜ್ಞಾನ ಮತ್ತು ತಂತ್ರಜ್ಞಾನ, ವೈದ್ಯಕೀಯ, ಶಿಕ್ಷಣ, ಕೃಷಿ, ರಾಜಕೀಯ, ಉದ್ಯಮ ಮುಂತಾದ ಕ್ಷೇತ್ರದಲ್ಲಿ ಪುರುಷರಿಗೆ ಸಮನಾಗಿ, ಇನ್ನೂ ಒಂದು ಹೆಜ್ಜೆ ಮುನ್ನಡೆ ಸಾಧಿಸಿದ್ದಾಳೆ. ಕುಟುಂಬದಲ್ಲಿ ಪ್ರೋತ್ಸಾಹ, ಸಾಧಿಸಬೇಕೆಂಬ ಛಲ, ಅವಕಾಶಗಳು, ಶಿಕ್ಷಣ ಮತ್ತು ಮೀಸಲಾತಿಯು ಎತ್ತರದ ಸ್ಥಾನವನ್ನು ತಲುಪಿಸಿ ಸಾಧಕ ಮಹಿಳೆಯನ್ನಾಗಿ ಮಾಡಿವೆ ಎಂದರು.

ಇನ್ನೋರ್ವ ಮುಖ್ಯ ಅತಿಥಿ ಸೌಭಾಗ್ಯ ಮಹಿಳಾ ಬ್ಯಾಂಕ್‌ನ ಚೇರಮನ್ ಶ್ರೀಮತಿ ವೀಣಾ ಪೋತ್ನೀಸ್ ಅವರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟನೆ ನೆರವೇರಿಸಿ ಸಂದರ್ಭೋಚಿತವಾಗಿ ಮಾತನಾಡಿದರು.

ಸಮಾರಂಭದಲ್ಲಿ ಸಾಧಕ ಮಹಿಳೆಯರಾದ ಮಂಗಳಾ ನೀಲಗುಂದ (ಕೃಷಿ) ಡಾ.ಅನುಪಮಾ ಪಾಟೀಲ (ವೈದ್ಯಕೀಯ), ಕವಿತಾ ಬೇಲೇರಿ (ವಿಕಲಚೇತನ ಮಕ್ಕಳ ಸೇವೆ), ಗಿರಿಜಾ ಬೇವಿನಕಟ್ಟಿ (ಶಿಕ್ಷಣ), ವೀಣಾ ಪೋತ್ನೀಸ್ (ಬ್ಯಾಂಕಿಂಗ್), ಸಂಜನಾ ಚಿಕ್ಕನಗೌಡ್ರ (ಕ್ರೀಡೆ), ನೇತ್ರಾ ಸುಲ್ತಾನಪೂರ (ಪ್ರತಿಭಾನ್ವಿತ ವಿದ್ಯಾರ್ಥಿನಿ) ಇವರುಗಳನ್ನು ಸನ್ಮಾನಿಸಲಾಯಿತು. ಸನ್ಮಾನಿತರು ಮಾತನಾಡಿದರು. ಸಾಧಕ ಮಹನೀಯರನ್ನು ಅಶ್ವಿನಿ ನೀಲಗುಂದ, ಅನಿತಾ ಹೆಬಸೂರ, ಮಂಜುಳಾ ಶಿವಪ್ಪಗೌಡ್ರ, ರೂಪಾ ಉತ್ತರಕರ, ವೀಣಾ ಸುಲಾಖೆ, ವಿಜಯಲಕ್ಷ್ಮೀ ಹೊಳಗುಂದಿ, ಅಪರ್ಣಾ ತೋಟದ ಪರಿಚಯಿಸಿದರು.

ವೇದಿಕೆಯ ಮೇಲೆ ಗದಗ–ಬೆಟಗೇರಿ ಲಾಯನ್ಸ್ ಕ್ಲಬ್ ಅಧ್ಯಕ್ಷ ರಮೇಶ ಶಿಗ್ಲಿ, ಕಾರ್ಯದರ್ಶಿ ಪ್ರವೀಣ ವಾರಕರ, ಖಜಾಂಚಿ ರಾಜು ಮಲ್ಲಾಡದ, ಸುರೇಖಾ ಮಲ್ಲಾಡದ ಉಪಸ್ಥಿತರಿದ್ದರು.

ಸಮಾರಂಭದ ಅಧ್ಯಕ್ಷತೆಯನ್ನು ಗದಗ–ಬೆಟಗೇರಿ ಲಾಯನ್ ಲೇಡಿಜ್ ಕ್ಲಬ್‌ನ ಅಧ್ಯಕ್ಷೆ ಸಾವಿತ್ರಿ ಶಿಗ್ಲಿ ವಹಿಸಿ ಸರ್ವರನ್ನು ಸ್ವಾಗತಿಸಿದರು. ಕುಮಾರಿ ಕ್ಷೀತಿಜ್ ಸುಲಾಖೆ ಪ್ರಾರ್ಥಿಸಿದರು ಲಾಯನ್ ಲೇಡಿಜ್ ಕ್ಲಬ್‌ನ ಕಾರ್ಯದರ್ಶಿ ಅಮೃತಾ ವಾರಕರ್ ನಿರೂಪಿಸಿ ವಂದಿಸಿದರು. ಕಾರ್ಯಕ್ರಮದಲ್ಲಿ ಕ್ಲಬ್‌ನ ಸರ್ವ ಪದಾಧಿಕಾರಿಗಳು, ಸದಸ್ಯರು ಹಾಗೂ ಗಣ್ಯರು ಪಾಲ್ಗೊಂಡಿದ್ದರು.

# ಗದಗ ತಾಲ್ಲೂಕು ಸ್ವೀಪ್ ಸಮಿತಿಯಿಂದ ಮೊಳಗಿದ ಮತದಾನ ಜಾಗೃತಿ




ಗದಗ: ಲೋಕಸಭಾ ಚುನಾವಣೆ–2024* ರ ಅಂಗವಾಗಿ ಇಂದು ಮತದಾನ ಜಾಗೃತಿಗಾಗಿ *ಗದಗ ತಾಲ್ಲೂಕು ಸ್ವೀಪ್ ಸಮಿತಿ* ಹಾಗೂ *ಕುರ್ತಕೋಟಿ ಹಾಗೂ ಅಂತೂರ್ ಗ್ರಾಮ ಪಂಚಾಯತಿ* ವತಿಯಿಂದ ಗ್ರಾಮದಲ್ಲಿ ಮತದಾನ ಜಾಗೃತಿ ಕಾರ್ಯಕ್ರಮಕ್ಕೆ ಕಾರ್ಯನಿರ್ವಾಹಕ ಅಧಿಕಾರಿಗಳಾದ ಮಾನ್ಯ ಶ್ರೀ ಮಾಣಿಕರಾವ್ ಪಾಟೀಲ್ ರವರು ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಚುನಾವಣೆಯನ್ನು ಎಲ್ಲರೂ ಹಬ್ಬದಂತೆ ಆಚರಿಸಬೇಕು. ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಬೇಕೆಂಬ ಉದ್ದೇಶದಿಂದ ವಿನೂತನವಾಗಿ ಸ್ವೀಪ್ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಇಂದು ಕುರ್ತಕೋಟಿ ಗ್ರಾಮದ ಸಾರ್ವಜನಕರಿಗೆ ಗ್ರಾಮದಲ್ಲಿ ಮತದಾನ ಜಾಗೃತಿ ಅಭಿಯಾನ ಕಾರ್ಯಕ್ರಮ ಆಚರಿಸಲಾಗುತ್ತಿದೆ ಎಂದರು.

ನಂತರ 18 ವರ್ಷ ತುಂಬುವ ಯುವ ಮತದಾರರಿಗೆ VHA App ದಲ್ಲಿ ನೋಂದಾಯಿಸಲು ಕರೆ ನೀಡಿದರು. ಕೊನೆಯಲ್ಲಿ ಸಹಾಯಕ ನಿರ್ದೇಶಕರು, ಗದಗ ತಾಲ್ಲೂಕು ಪಂಚಾಯತಿ ರವರು ಮಾತನಾಡಿ ಕುರ್ತಕೋಟಿ ಹಾಗೂ ಅಂತೂರ್ ಎರಡು ಗ್ರಾಮ ಪಂಚಾಯತಿ ವತಿಯಿಂದ ಆಯೋಜಿಸಿರುವ ಈ ಕಾರ್ಯಕ್ರಮ ಅರ್ಥಪೂರ್ಣ ವಾಗಬೇಕಾದರೆ ಗ್ರಾಮದ ಎಲ್ಲ ಮತದಾರರು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಅಂದರೆ ಮೇ 7 ರಂದು ಕಡ್ಡಾಯವಾಗಿ ಮತದಾನ ಮಾಡಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯತ್ ಸಹಾಯಕ ನಿರ್ದೇಶಕ (ಗ್ರಾ. ಉ) ತಾ.ಪಂ. ಲೆಕ್ಕಧಿಕಾರಿ, ಗ್ರಾ.ಪಂ ಪಿಡಿಒ. ನರೇಗಾ ಸಿಬ್ಬಂದಿಗಳು ಹಾಗೂ ಕಾಯಕ ಬಂಧುಗಳು, ಸ್ವಸಹಾಯ ಸಂಘದ ಸದಸ್ಯರು, ಮತ್ತು ಪಂಚಾಯತ ಸಿಬ್ಬಂದಿಗಳು ಹಾಜರಿದ್ದರು.

# ಸಾರ್ವಜನಿಕರ ಗಮನಕ್ಕೆ

ಗದಗ ಮಾರ್ಚ 21: ಗ್ರಾಮೀಣ ನೀರು ಸರಬರಾಜು& ನೈರ್ಮಲ್ಯ ವಿಭಾಗ,ಗದಗ ವ್ಯಾಪ್ತಿಯಲ್ಲಿ ಬರುವ ಗದಗ, ಮುಂಡರಗಿ, ನರಗುಂದ, ರೋಣ& ಶಿರಹಟ್ಟಿ ತಾಲೂಕಗಳ ವ್ಯಾಪ್ತಿಯಲ್ಲಿ ಬರುವ 343 ಜನವಸತಿಗಳಲ್ಲಿ ವಾಸಿಸುವ ಎಲ್ಲಾಸಾರ್ವಜನಕರಿಗೆ ತಿಳಿಯಪಡಿ ಸುವುದೇನೆಂದರೆ, ಜಿಲ್ಲೆಯ ಪ್ಯಾಕೇಜ್–1 ರ ಯೋಜನೆಯನ್ನು ಸವದತ್ತಿಯ ನವಿಲು ತೀರ್ಥದ ರೇಣುಕಾ ಜಲಾಶಯದಲ್ಲಿರುವ ಮಲಪ್ರಭಾ ನದಿಯಿಂದ ನರಗುಂದ ಮತ್ತು ರೋಣ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಒಟ್ಟು 131 ಜನವಸತಿಗಳಿಗೆ ಸಂಬಂಧ ಪಟ್ಟಗ್ರಾಮ ಪಂಚಾಯತಿಯ ವ್ಯವಸ್ಥೆಯಡಿ ಮೇಲ್ಮಟ್ಟದಜಲ ಸಂಗ್ರಹಗಾರಗಳಿಗೆ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ ಮತ್ತುಪ್ಯಾಕೇಜ್–2ರ ಯೋಜನೆಯನ್ನು ಶಿಂಗಟಾಲೂರು ಬ್ಯಾರೇಜನ ಹತ್ತಿರ ಇರುವ ತುಂಗಭದ್ರಾ ನದಿಯಿಚಿದ ಗದಗ, ಮುಂಡರಗಿ ಮತ್ತು ಶಿರಹಟ್ಟಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಒಟ್ಟು212 ಜನವಸತಿಗಳಿಗೆ ಸಂಬಂಧಪಟ್ಟಗ್ರಾಮ ಪಂಚಾಯತಿಯ ವ್ಯವಸ್ಥೆಯಡಿ ಮೇಲ್ಮಟ್ಟದ ಜಲ ಸಂಗ್ರಹಗಾರಗಳಿಗೆ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ.ಪ್ರಸ್ತುತ ಮಲಪ್ರಭಾ ಮತ್ತು ತುಂಗಭದ್ರಾ ನದಿ ಪಾತ್ರದಲ್ಲಿ ನೀರಿನ ಹರಿವು ಕಡಿಮೆಯಾಗಿದ್ದು, ಮೂಲ ಜಲಾಶಯಗಳಲ್ಲಿ ಕೂಡಾ ನಿರೀಕ್ಷಿತ ಮಟ್ಟದಲ್ಲಿ ನೀರಿನ ಪ್ರಮಾಣ ಸಂಗ್ರಹವಿರದೇ ಇರುವ ಹಿನ್ನಲೆಯಲ್ಲಿ ನೀರು ಸರಬರಾಜು ಮಾಡುವುದು ಕಷ್ಟ ಸಾಧ್ಯವಾಗಿರುತ್ತದೆ. ಜಿಲ್ಲೆಯ ಎಲ್ಲಾ ನೀರು ಬಳಕೆದಾರರು ಶ್ಮಚಿತ್ವ ಕಾಪಾಡಿಕೊಂಡು, ಶುದ್ದವಾಗಿ ನೀರನ್ನು ಸಂಗ್ರಹಿಸಿಟ್ಟುಕೊಳ್ಳಬೇಕು ಹಾಗೂ ಮಿತವಾಗಿ ನೀರನ್ನು ಬಳಸಬೇಕು. ಅಗತ್ಯಕ್ಕೆ ತಕ್ಕಂತೆ ನೀರನ್ನು ಬಳಸುವುದರಿಂದ ನೀರಿನ ಉಳಿತಾಯ ಮಾಡಬಹುದು, ನೀರನ್ನು ಅನ್ಯತಾ ವ್ಯರ್ಥ ಮಾಡಬಾರದು, ನಳದಲ್ಲಿ ಅಥವಾ ಪೈಪಲೈನ್‌ನಲ್ಲಿ ನೀರಿನ ಸೋರಿಕೆ ಕಂಡು ಬಂದಲಿ ?ಲಸಂಬಂಧಪಟ್ಟ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಗಳ ಗಮನಕ್ಕೆ ತರಬೇಕೆಂದು ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗದ ಪ್ರಕಟಣೆ ತಿಳಿಸಿದೆ.

# ಇಂದು ವಿದ್ಯುತ್ ವ್ಯತ್ಯಯ

ಶಿವಮೊಗ್ಗ, ಮಾರ್ಚ್ –20, : ಗಾಜನೂರು ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವುದರಿಂದ ಮಾ. 23 ರಂದು ಬೆಳಗ್ಗೆ 09.00 ರಿಂದ ಸಂಜೆ 06–00ರವರೆಗೆ ಗಾಜನೂರು, ಕ್ಯಾಂಪ್ ಮತ್ತು ಡ್ಯಾಮ್, ಸಕ್ಕರೆಬೈಲು, ನವೋದಯ ಶಾಲೆ, ಶಿವಮೊಗ್ಗ ಕುಡಿಯುವ ನೀರಿನ ಸ್ಥಾವರ, ಹಾಲಲಕ್ಕವಳ್ಳಿ, ಕಡೆಕಲ್, ಯರಗ ನಾಳ್, ಕುಸ್ಕೂರು, ಶ್ರೀಕಂಠಪುರ, ವೀರಾಪುರ, ತಟ್ಟಿಕೆರೆ, ಹೊಸಕೊಪ್ಪ, ಇಂದಿರಾನಗರ, ಹೊಸಹಳ್ಳಿ, ಮುಳ್ಕೆರೆ, ಆನೆಬಿಡಾರ, ತಿಮ್ಮಾಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಮೆಸ್ಕಾಂ ಪ್ರಕಟಣೆ ತಿಳಿಸಿದೆ.